**ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.**

**ಅಧ್ಯಕ್ಷರು:** ಈಗ ಸದನವನ್ನು ನಾಳೆ ಬೆಳಿಗ್ಗೆ 11–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 31 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 07ನೇ ಜೂನ್ 2011ರ ಮಂಗಳವಾರ ಬೆಳಿಗ್ಗೆ 11–00 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು)

**ಅನುಬಂಧ – I**

**(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಪ್ರಾಣಿ ಸಂಗ್ರಹಾಲಯದ ಪದ್ಧತಿ**

**10 (44) ಶ್ರೀ ಬಸವರಾಜನ್ ಎಸ್.ಕೆ (ಚಿತ್ರದುರ್ಗ):** ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಚಿತ್ರದುರ್ಗ ಜಿಲ್ಲೆಯ ಆಡುಮಲ್ಲೇಶ್ವರದಲ್ಲಿ ಪ್ರಾಣಿ ಸಂಗ್ರಹಾಲಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಪ್ರಾಣಿ ಸಂಗ್ರಹಾಲಯವು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಪ್ರಾಣಿ ಸಂಗ್ರಹಾಲಯವನ್ನು ಅಭಿವೃದ್ಧಿ ಪಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಈ) ಸರ್ಕಾರ ಈಗಲಾದರೂ ಈ ಪ್ರಾಣಿ ಸಂಗ್ರಹಾಲಯವನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳುವುದೇ;

ಉ) ಈ ಪ್ರಾಣಿ ಸಂಗ್ರಹಾಲಯದಲ್ಲಿ ಪ್ರಾಣಿಗಳಿಗೆ ಪಂಜರಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದಯೇ;

ಊ) ಹಾಗಿದ್ದಲ್ಲಿ ಈ ಪಂಜರಗಳ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು):**

ಅ) ಹೌದು.

ಆ) ಈ ಪ್ರಾಣಿ ಸಂಗ್ರಹಾಲಯವು ದುಸ್ಥಿತಿಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಈ) ಈ ಪ್ರಾಣಿ ಸಂಗ್ರಹಾಲಯವನ್ನು ಇನ್ನೂ ಅಭಿವೃದ್ಧಿ ಪಡಿಸಲು ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ Central Zoo Authority, New Delhi ರವರಿಗೆ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಉ) ಈ ಹಿಂದೆ ಪ್ರಾಣಿ ಸಂಗ್ರಹಾಲಯದಲ್ಲಿ ಪ್ರಾಣಿಗಳಿಗೆ ಪಂಜರಗಳ ಕೊರತೆ ಇತ್ತು. ಈಗ ಇದನ್ನು ಸರಿಪಡಿಸಲಾಗಿದೆ.

ಊ) ಪ್ರಾಣಿ ಸಂಗ್ರಹಾಲಯದ ಪ್ರವೇಶ ಶುಲ್ಕದಿಂದ ಬಂದ ಹಣದಿಂದ ಪಂಜರಗಳ ಕೊರತೆಯನ್ನು ಸರಿಪಡಿಸಲಾಗಿದೆ. ಈ ಪ್ರಾಣಿ ಸಂಗ್ರಹಾಲಯಕ್ಕೆ ಸಾರ್ವಜನಿಕರು ಮತ್ತು ಪ್ರವಾಸಿಗರನ್ನು ಆಕರ್ಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಪಿತ್ರಾರ್ಜಿತ ಜಮೀನು ಬೀಳುಬಿದ್ದಿರುವ ವಿಚಾರ**

**02 (48) ಶ್ರೀ ಚಂದ್ರಶೇಖರ್ ಕೆ.ಬಿ. (ಕೆ.ಆರ್.ಪೇಟೆ):** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರ ಪಿತ್ರಾರ್ಜಿತ ಜಮೀನು ಬೀಳುಬಿದ್ದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದದ್ದಲ್ಲಿ, ರೈತರ ಬೀಳು ಜಮೀನುಗಳನ್ನು ಮರು ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) ರೈತರು ಸಾಗುವಳಿ ಮಾಡುತ್ತಿರುವ ಬೀಳು ಜಮೀನುಗಳನ್ನು ಮರು ಮಂಜೂರು ಮಾಡಿಕೊಡಲು ಸರ್ಕಾರ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು;

ಈ) ಮರು ಮಂಜೂರಾತಿಗೆ ಸರ್ಕಾರ ಆದೇಶಿಸಲು ಎಷ್ಟು ದಿನಗಳ ಕಾಲಾವಕಾಶ ಬೇಕಾಗುತ್ತದೆ? (ಮಾಹಿತಿ ನೀಡುವುದು)

**ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):**

ಅ) ಕಂದಾಯ ಕಟ್ಟದೆ ಪಡಾ ಅಥವಾ ಬೀಳು ಬಿದ್ದಿರುವ ಜಮೀನು ಕುರಿತು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಪಡಾ ಅಥವಾ ಬೀಳು ಬಿದ್ದಿರುವ ಜಮೀನುಗಳನ್ನು ಪಡಾ ರೆಸ್ಟೋರ್ ಮಾಡಲು ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್.ಡಿ. 70 ಎಲ್‌ಜಿಪಿ 2002 ದಿನಾಂಕ 28.05.2004ರಲ್ಲಿ ಕರ್ನಾಟಕ ಭೂ ಕಂದಾಯ ನಿಯಮಗಳು 1966 ರ ನಿಯಮ 119 (2)ಕ್ಕೆ ತಿದ್ದುಪಡಿತಂದು, ದಿನಾಂಕ 28.05.2004 ರಿಂದ 6 ತಿಂಗಳ ಅವಧಿಯಲ್ಲಿ ಪಡಾ ಬಿದ್ದಿರುವ ಜಮೀನುಗಳನ್ನು ರೆಸ್ಟೋರ್